ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಚಾರ ಇದೆ. ಇದಕ್ಕೆ ಮಾನ್ಯ ಸಂಸದೀಯ ಸಚಿವರು ಹಾಗೂ ಮಾನ್ಯ ಸಭಾಧ್ಯಕ್ಷರು ಈ ಕಡೆಗೆ ಗಮನಿಸಬೇಕು.

ಅಧ್ಯಕ್ಷರು:– ಏನೆಂದು ಹೇಳಿ.

2. ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಮದು ಮೊದಲನೆಯ ಪ್ರಶ್ನೆಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಉತ್ತರ ಇದೆ.

ಅಧ್ಯಕ್ಷರು:– ಈಗ ನಾನು ಹೇಳುತ್ತೇನೆ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವಿಧಾನ ಪರಿಷತ್ತಿನಲ್ಲಿ ಹಕ್ಕು ಬಾಧ್ಯತಾ ಸಮಿತಿಯವರು, ಇವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ, ..

ಅವ್ಯವಹಾರ ಆಗಿರುವಂಥ ಅನೇಕ ವಿಷಯಗಳನ್ನು ಮುಚ್ಚಿಡುವಂಥ ಮತ್ತು ಅದನ್ನು ರಕ್ಷಿಸುವಂಥ ಪ್ರಯತ್ನವನ್ನು ಮಾಡುತ್ತಿದಾರೆ. ಆದ್ದರಿಂದ, ಹಕ್ಕುಚ್ಯುತಿ ಆಗಿದೆ ಎಂದು ವಿಧಾನಪರಿಷತ್‌ನ ಹಕ್ಕುಬಾಧ್ಯತೆಗಳ ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಎರಡೂ ಸದನಕ್ಕೆ ಅವರು ಸಚಿವರಾಗಿರುವುದರಿಂದ ಇಂಥ ಸಚಿವರು ಇಲ್ಲಿ ಉತ್ತರವನ್ನು ಹೇಳುವುದಕ್ಕೆ ಈ ಸನದಲ್ಲಿ ಅವಕಾಶ ಕೊಡಬೇಕೆ? ಆ ಬಗ್ಗೆ ಇತ್ಯರ್ಥವಾದ ಮೇಲೆ ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಆದ್ದರಿಂದ ಈಗ ಅವರಿಗೆ ಉತ್ತರ ಹೇಳುವುದಕ್ಕೆ ತಾವು ಅವಕಾಶ ಕೊಡಬಾರದು, ಏಕೆಂದರೆ ಅವರ ಮೇಲೆ ಹಕ್ಕುಚ್ಯುತಿಯಾಗಿದೆ. ಅವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ದಾಖಲೆಯಿಂದ ಸ್ಪಷ್ಟ ಆಗಿದೆ. ಅಪರಾಧಿಗಳನ್ನು ರಕ್ಷಿಸುವಂಥ ಕೆಲಸವನ್ನು ಅವರು ಮಾಡುತ್ತಿದ್ದಾರೆ.

ಅಧ್ಯಕ್ಷರು:– ಅದರ ಬಗ್ಗೆ ವರದಿ ಇದೆ. ಆ ವರದಿಯ ಮೇಲೆ ಚರ್ಚೆ ಮಾಡುವುದಕ್ಕೆ ನಾನು ಬೇರೆ ರೂಪದಲ್ಲಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಲ್ಲಿಯತನಕ ಮಾನ್ಯ ಸಚಿವರು ಉತ್ತರ ಹೇಳಬಾರದು. ಅಲ್ಲಿ ತಪ್ಪು ಮಾಹಿತಿ ಕೊಟ್ಟಿರುವವರು ಇಲ್ಲಿ ಹೇಗೆ ಉತ್ತರ ಹೇಳುತ್ತಾರೆ?

(ಗೊಂದಲ)

ಅಧ್ಯಕ್ಷರು:– ಆ ರೀತಿ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಅವರು ಎಲ್ಲಿಯವರೆಗೆ ಈ ಸದನದ ಸದಸ್ಯರಾಗಿ ಮಂತ್ರಿಯಾಗಿರುತ್ತಾರೆಯೋ ಅಲ್ಲಿಯವರೆಗೆ ಉತ್ತರ ಕೊಡುವುದಕ್ಕೆ ಅವರಿಗೆ ಅಧಿಕಾರ ಇದೆ. ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಹಕ್ಕುಚ್ಯುತಿ ಸಮಿತಿಯವರು ಅವರ ಮೇಲೆ ಹಕ್ಕುಚ್ಯುತಿಯಾಗಿದೆ ಎಂದು ವರದಿ ಕೊಟ್ಟಿದ್ದಾರೆ. ನಿಜವಾಗಿಯೂ ಅವರು ರಾಜಿನಾಮೆ ಕೊಡಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ತೀರ್ಮಾನವಾಗುವವರೆಗೆ ಅವರಿಗೆ ಅವಕಾಶ ಕೊಡುವುದು ಬೇಡ.

(ಗೊಂದಲ)

ಅಧ್ಯಕ್ಷರು:– ಈ ಬಗ್ಗೆ ಚರ್ಚೆಗೆ ತೆಗೆದುಕೊಂಡಾಗ ಈ ಎಲ್ಲ ವಿಷಯ ಹೇಳಿ. ಆದರೆ, ಈಗ ಬೇಡ.

ಶ್ರೀ ವಿ. ಸುನೀಲ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಈಗ ಅವಕಾಶ ಕೊಡಿ.

ಶ್ರೀ ಖಮರುಲ್ ಇಸ್ಲಾಂ:– It is totally false and wholly baseless allegation.

(ಗೊಂದಲ)

ಅಧ್ಯಕ್ಷರು:– ಅಲ್ಲಿ ವರದಿ ಕೊಟ್ಟಿದ್ದಾರೆ. ಆ ವರದಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ದಯವಿಟ್ಟು ಕಲಾಪ ನಡೆಸುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್:– ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಅವರಿಗೆ ಅವಕಾಶ ಕೊಡಬೇಡಿ.

(ಗೊಂದಲ)

ಅಧ್ಯಕ್ಷರು:– ನಿಮ್ಮಷ್ಟೆ ದೊಡ್ಡದಾಗಿ ಕೂಗಾಡುವುದಕ್ಕೆ ಶಕ್ತಿ ನನಗೆ ಇದೆ. ಆದ್ದರಿಂದ, ಸುಮ್ಮನೆ ಕೂಗಾಡುವುದಕ್ಕೆ ಹೋಗಬೇಡಿ.

ಶ್ರೀ ಖಮರುಲ್ ಇಸ್ಲಾಂ:– It is illegal and baseless allegation.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಸಚಿವರು ರಾಜೀನಾಮೆ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆದ್ದರಿಂದ, ಅವರು ರಾಜೀನಾಮೆ ಕೊಡಬೇಕು.

(ಗೊಂದಲ)

ಅಧ್ಯಕ್ಷರು:– ನಾನು ಈಗಾಗಲೇ ಹೇಳಿದಂತೆ ಚರ್ಚೆಗೆ ತೆಗೆದುಕೊಳ್ಳಿ. ಆನಂತರ ನೋಡೋಣ. ಆದರೆ, ಈಗ ಇವೆಲ್ಲ ಬೇಡ.

ಶ್ರೀ ವಿ. ಸುನೀಲ್ ಕುಮಾರ್:– ಅಲ್ಲಿಯವರೆಗೆ ಅವರು ಪ್ರಶ್ನೆಗಳಿಗೆ ಉತ್ತರ ಕೊಡುವುದು ಬೇಡ.

ಅಧ್ಯಕ್ಷರು:– ಆ ರೀತಿಯೆಲ್ಲ ಮಾಡುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ತಾವು ಹಿರಿಯರಿದ್ದೀರಿ, ಇದು ಸರಿಯಲ್ಲ.

ಅಧ್ಯಕ್ಷರು:– ಹಾಗಾದರೆ, ಯಾವ ರೂಲ್‌ನಲ್ಲಿದೆ ನನಗೆ ತೋರಿಸಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವೇ ಹೀಗೆ ಮಾಡಿದರೆ ನಾನೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಮಾಡೋಣ. ಆನಂತರ ಅವರು ಸ್ಪಷ್ಟೀಕರಣ ಕೊಡಲಿ. ಇಲ್ಲದಿದ್ದರೆ ಅವರು ಸದನಕ್ಕೆ ಮತ್ತೆ ತಪ್ಪು ಮಾಹಿತಿ ಕೊಡಬಹುದು. ಆಗ ಮತ್ತೊಂದು ಹಕ್ಕುಚ್ಯುತಿ ಆಗುತ್ತದೆ. (ಗೊಂದಲ) ಮಾನ್ಯ ಸಚಿವರು ಅಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದರಿಂದ, ಅದು ಹಕ್ಕುಚ್ಯುತಿ ಆಗಿದೆ ಎಂದು ಹಕ್ಕುಬಾಧ್ಯತೆ ಸಮಿತಿಯ ಅಧ್ಯಕ್ಷರು ವರದಿ ಕೊಟ್ಟಿದ್ದಾರೆ. ಆದ್ದರಿಂದ, ಅವರನ್ನು ಅಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಆದ್ದರಿಂದ, ಈ ಬಗ್ಗೆ ಇತ್ಯರ್ಥ ಆಗುವವರೆಗೆ ಅವರು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಅವರು ರಾಜೀನಾಮೆ ಕೊಡಬೇಕು.

(ಗೊಂದಲ)

ಅಧ್ಯಕ್ಷರು:– ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಇದು ವಿಧಾನ ಪರಿಷತ್‌ಗೆ ಸಲ್ಲಿಸಿರುವಂಥ ವರದಿಯಾಗಿದೆ. ಆದ್ದರಿಂದ, ಈ ಬಗ್ಗೆ ಆ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಅವರ ಸ್ನೇಹಿತರು ಅಲ್ಲಿರುವುದರಿಂದ ಈ ಬಗ್ಗೆ ಅಲ್ಲಿ ಚರ್ಚೆ ಮಾಡಲಿ. ಬಂದಿರತಕ್ಕಂಥ ವರದಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಈ ಬಗ್ಗೆ ವಿಧಾನ ಪರಿಷತ್‌ನಲ್ಲಿ ಚರ್ಚೆ ಮಾಡಿದರೆ ಸೂಕ್ತ. ಆದ್ದರಿಂದ, ಅಲ್ಲಿ ಪ್ರಸ್ತಾಪ ಮಾಡಿ ಚರ್ಚೆ ಮಾಡಲಿ.

ಅಧ್ಯಕ್ಷರು:– ಈ ಬಗ್ಗೆ ಆನಂತರ ಪರಿಶೀಲನೆ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಸಚಿವರು ಈ ಸದನ ಸಚಿವರು ಹೌದೋ ಅಲ್ಲವೋ? ಆ ಸದನಕ್ಕಲದೆ ಈ ಸದನಕ್ಕೂ ಸಹ ಅವರು ಸಚಿವರಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು:– I will examine that.

ಶ್ರೀ ಸಿ.ಟಿ. ರವಿ:– ತಾವು ಈ ಸದನಕ್ಕೆ ಸಾಕಷ್ಟು ಬೆಳಕು ಚೆಲ್ಲುವಂಥ ಹಿರಿಯ ಸಚಿವರಾಗಿದ್ದೀರಿ. ಆದ್ದರಿಂದ, ಈ ವಿಷಯದ ಬಗ್ಗೆ ತಾವು ಹೇಳಿ. ಆ ವಿಷಯವನ್ನು ಸಮಿತಿಗೆ ರೆಫರ್ ಮಾಡಿ ಆನಂತರ ಅವರು ಹಕ್ಕುಚ್ಯುತಿ ಮಾಡಿದ್ದಾರೆಂದು ವರದಿ ಕೊಟ್ಟ ಮೇಲೆ ಅವರು ಯಾವ ನೈತಿಕತೆ ಆಧಾರದ ಮೇಲೆ ಇದ್ದಾರೆ? ಇಷ್ಟು ಹೊತ್ತಿಗಾಗಲೇ ಅವರಿಂದ ಗೌರವಯುತವಾಗಿ ನೀವು ರಾಜೀನಾಮೆಯನ್ನು ಪಡೆದುಕೊಳ್ಳಬೇಕಾಗಿತ್ತು.

ಶ್ರೀ ಟಿ.ಬಿ. ಜಯಚಂದ್ರ:– ನಮ್ಮ ಕರ್ನಾಟಕ ರಾಜ್ಯದಲ್ಲಿ ಎರಡು ಸದನ ಇವೆ.

ಶ್ರೀ ಸಿ.ಟಿ. ರವಿ:– ನೀವು ಮೇಲ್ಪಂಕ್ತಿ ಹಾಕುವುದಾದರೆ ಅವರಿಂದ ರಾಜೀನಾಮೆಯನ್ನು ಪಡೆದುಕೊಳ್ಳಬೇಕಾಗಿತ್ತೇ ಹೊರತು ಈ ಸದನ ಮುಖಾಂತರ ಕೇಳುವುದಲ್ಲ.

ಅಧ್ಯಕ್ಷರು:– ಮಾನ್ಯ ರವಿಯವರೇ, ಸಾಕು ಇಲ್ಲಿಗೆ ಬಿಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆಯಾಗಲಿ. ಆದ್ದರಿಂದ, ಚರ್ಚೆಗೆ ತಾವು ಅವಕಾಶ ಕೊಡಬೇಕು. ನೈತಿಕವಾಗಿ ಅವರು ಉತ್ತರ ಕೊಡಬಾರದೆಂದು ನಾನು ಆಗ್ರಹಿಸುತ್ತೇನೆ.

ಅಧ್ಯಕ್ಷರು:– ಆಯಿತು ಬಿಡಿ. ಈಗ ಪ್ರಶ್ನೋತ್ತರ ವೇಳೆ. ಮಾನ್ಯ ಕೋಳಿವಾಡರವರೆ, ತಾವು ಪ್ರಶ್ನೆ ಕೇಳಿ.

3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು,

ನಗರೋತ್ಥಾನ ಯೋಜನೆ ಅಡಿ ರಸ್ತೆಗಳು

61(159); ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು)

ಅ) ಹಾವೇರಿ ಜಿಲ್ಲೆ ಪ್ರತಿ ತಾಲ್ಲೂಕಿನಲ್ಲಿ ನಗರೋತ್ಥಾನ ಯೋಜನೆಯಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ರಸ್ತೆ ಮಂಜೂರಾಗಿದೆ; ಮಂಜೂರಾದ ರಸ್ತೆಗಳಲ್ಲಿ ಎಷ್ಟು ಕಿ.ಮೀ. ಪೂರ್ಣಗೊಂಡಿದೆ; ಉಳಿದ ಕಿ.ಮೀ. ರಸ್ತೆ ಮಾಡಲು ವಿಳಂಬಕ್ಕೆ ಕಾರಣಗಳೇನು;

ಆ) ಒಳ ಚರಂಡಿ ಯೋಜನೆ ಹಾವೇರಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ಉದ್ದ ಮಂಜೂರಾಗಿದೆ; ಎಷ್ಟು ಬಾಕಿ ಇದೆ; ವಿಳಂಬಕ್ಕೆ ಕಾರಣಗಳೇನು?